ಕೊಟ್ಟಿದ್ದಾರೆ. ಸ್ಟೇ ಮಾಡಲಿಕ್ಕೆ ಇರತಕ್ಕಂಥ ಅವರ ಅರ್ಜಿ ಯಾವುದು ಇದೆ, ಉಚ್ಚ ನ್ಯಾಯಾಲಯದ ಡಿವಿಜನ್ ಬೆಂಚ್‌ನ ತೀರ್ಪನ್ನು ತಡೆಹಿಡಿಯಬೇಕು ಎಂದು ಕೊಟ್ಟಿರತಕ್ಕಂಥ ಅರ್ಜಿ ಯಾವುದು ಇದೆ, ಎಂ.ಸಿ.ಐ.ನವರು, ಅದಕ್ಕೆ ನೋಟೀಸ್‌ನ್ನು ಕೊಟ್ಟು ನಾಲ್ಕುವಾರಗಳ ಸಮಯವನ್ನು ಕೊಟ್ಟಿದ್ದಾರೆ. ಇನ್ ದಿ ಮೀನ್‌ವೈಲ್ ಈ ಒಂದು ಅಬ್ಸರ್‌ವೇಷನ್ ಅನ್ನು ಮಾಡಿದ್ದಾರೆ. ಅದಕ್ಕೆ ನಾವು ರಾಜ್ಯಸರ್ಕಾರದ ವತಿಯಿಂದ ಫ್ಯಾಕ್ಟುಯಲ್ ಆಗಿರತಕ್ಕಂಥ ಆ ವರದಿಯನ್ನು ಸುಪ್ರೀಂ ಕೋರ್ಟ್ ಮುಂದೆ ದಾಖಲು ಮಾಡುತ್ತೇವೆ.

ಉಪಾಧ್ಯಕ್ಷರು: ಶ್ರೀ ಪುಟ್ಟಣ್ಣಯ್ಯನವರು....

(ಈ) ಹದಿನೆಂಟು ಸಾವಿರ ರೂಪಾಯಿ ಆದಾಯ ಮಿತಿ ಮೀರಿದವರ ಹುಲ್ಲು ಮೆದೆಗೆ ಬೆಂಕಿ ಬಿದ್ದಿದ್ದರೂ ಪರಿಹಾರ ನೀಡದಿರುವುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಕಂದಾಯ ಮಂತ್ರಿಗಳಿಗೆ ಈ ದನಗಳ ಮೇವಿನ ಬಗ್ಗೆ ಕೇಳುತ್ತಿದ್ದೇನೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇದಕ್ಕೆ ಯಾರು ಉತ್ತರ ಕೊಡಬೇಕು ಎಂದು ಅವರಲ್ಲೇ ಜಿಜ್ಞಾಸೆ ಉಂಟಾಗಿದೆ. ದನದ ಮಂತ್ರಿಗಳೋ, ಇಲ್ಲ ಕೃಷಿ ಮಂತ್ರಿಗಳೋ? ಯಾರು ಉತ್ತರ ಕೊಡಬೇಕು?

ಉಪಾಧ್ಯಕ್ಷರು: ಮೊದಲು ಅವರು ಪ್ರಶ್ನೆ ಕೇಳಲಿ. ಆಮೇಲೆ ಉತ್ತರ ಕೊಡುತ್ತಾರೆ. ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಬಿಹಾರ್‌ನಲ್ಲಿ ಆಗಿರತಕ್ಕಂಥ ಒಂದು ವಿಷಯ ಕರ್ನಾಟಕ ಸರ್ಕಾರದಲ್ಲಿ ಬಂದಿಲ್ಲದೇ ಇರುವುದರಿಂದ ಅದು ಅಲ್ಲ. ಮಾನ್ಯ ಉಪಾಧ್ಯಕ್ಷರೇ, ದನಗಳ ಮೇವಿನ ಹುಲ್ಲಿನ ಬಣವೆಗಳಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಸುಟ್ಟುಹೋದರೆ ಅದಕ್ಕೆ ಪರಿಹಾರ ಕೊಡುವ ವಿಚಾರದಲ್ಲಿ ಆದಾಯ ಮಿತಿ ನೆಪದಲ್ಲಿ ರೈತರಿಗೆ ವಂಚಿಸುತ್ತಿದ್ದು ಅದನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ನೆಲ್ಲುಹುಲ್ಲಿಗೆ ಬೆಂಕಿ ಬಿದ್ದರೆ ಇಷ್ಟಿಷ್ಟಕ್ಕೇ ಬೆಂಕಿಬೀಳಬೇಕು ಎಂದು ಬೆಂಕಿಗೆ ಕಾನೂನು ಏನಾದರೂ ಮಾಡಿದ್ದೀರೊ ಎಂಬುದು ಗೊತ್ತಿಲ್ಲ. ಒಂದು ಉದಾಹರಣೆಯನ್ನು ತಮಗೆ ನಾನು ಕೊಡುತ್ತೇನೆ. ನೆಲ್ಲುಹುಲ್ಲು ಮೆದೆಗೆ ಬೆಂಕಿಬಿದ್ದರೆ 18 ಸಾವಿರ ರೂಪಾಯಿ ಆದಾಯ ಮಿತಿಯ ಕಾರಣದಿಂದ ನಷ್ಟ ಉಂಟಾದ ವ್ಯಕ್ತಿಗೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ತಹಸೀಲ್ದಾರರು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ಅದು ಎಷ್ಟೇ ಆಗಲಿ, ಆದಾಯ ಮಿತಿ ಎಂದರೆ ತಾವು ಬೆಂಕಿಗೆ ಏನಾದರೂ ಆದಾಯಮಿತಿ ಫಿಕ್ಸ್

ಮಾಡಿದ್ದೀರಾ? ಇಂತಿಂಥ ಆದಾಯ ಮಿತಿಯವರು ಬೆಂಕಿಹಚ್ಚಿಸಿ, ಇಂತಿಂಥ ಆದಾಯದವರು ಬೆಂಕಿ ಹಚ್ಚಿಸಬೇಡಿ ಎಂದು ಮಾಡಿದ್ದೀರಾ? ದಯವಿಟ್ಟು ತಾವು ವೈಜ್ಞಾನಿಕವಾಗಿ ಚಿಂತನೆ ಮಾಡಿ. ನೆಲ್ಲುಹುಲ್ಲು ಯಾವುದೇ ಮೆದೆ ಸುಡಲಿ, ಅದಕ್ಕೆ ಆದಾಯ ಮಿತಿ ಇರಬಾರದು. ಅದು ನಷ್ಟ ಎಂದು ಪರಿಗಣಿಸಿ ಅವರಿಗೆ ಸರ್ಕಾರ ವೈಜ್ಞಾನಿಕವಾಗಿ ಪರಿಹಾರ ಕೊಡುವುದರಲ್ಲಿ ವಿಫಲವಾಗಿದೆ. ಸರ್ಕಾರಕ್ಕೆ ಯಾರು ಹೀಗೆ ತಿಳುವಳಿಕೆ ಕೊಡುತ್ತಾರೋ ಗೊತ್ತಿಲ್ಲ. ಈ ದೇಶದಲ್ಲಿ ಏನಾಗಿದೆ ಎಂದರೆ, ನೆಲ್ಲುಹುಲ್ಲು ಎಂದರೆ ಏನು ಎಂಬುದು ಗೊತ್ತಿಲ್ಲ, ಹಸಿರುಹುಲ್ಲು ಎಂದರೆ ಏನು ಎಂಬುದು ಗೊತ್ತಿಲ್ಲ, ರಾಗಿ ಹುಲ್ಲು ಎಂದರೆ ಏನು ಎಂಬುದು ಗೊತಿಲ್ಲ, ಜೋಳದ ಕಡ್ಡಿ ಎಂದರೆ ಏನು ಎಂಬುದು ಗೊತ್ತಿಲ್ಲ. ಒಂದು ವರ್ಷಕ್ಕೆ 18 ಸಾವಿರ ಕೋಟಿ ರೂಪಾಯಿ ಮೇವು ಹಾಕಬೇಕು ನಾವು. ನೆಲ್ಲುಹುಲ್ಲು, ಹಸಿರುಹುಲ್ಲು, ರಾಗಿಹುಲ್ಲು ಎಂದು ಒಂದು ವರ್ಷಕ್ಕೆ ಅದರ ಬೆಲೆ ನಿಗದಿಮಾಡಿದರೆ 18 ಸಾವಿರ ಕೋಟಿ ರೂಪಾಯಿ ಆಗುತ್ತದೆ. ಇಡೀ ರಾಜ್ಯಸರ್ಕಾರ ದನಗಳ ಮೇಲೆ ಬದುಕಿರುವುದು. ದನ ಮೇಯುವ ಹುಲ್ಲಿಗೆ ನಷ್ಟವಾದರೆ, ಅದು ದೊಡ್ಡ ಮೆದೆಗೆ ಬಿದ್ದರೆ ಮಾತ್ರ ನಾವು ದುಡ್ಡು ಕೊಡುವುದು, ಸಣ್ಣ ಮೆದೆಗೆ ಕೊಡುವುದು ಎಂದು....

ಶ್ರೀ ವಾಟಾಳ್ ನಾಗರಾಜ್: ಸರ್ಕಾರ ಕೋಣ ಇದ್ದ ಹಾಗೆ ತಾನೆ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಆದ್ದರಿಂದ ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳು, ಗಾಂಧಿ ಟೋಪಿ ಹಾಕಿದ್ದೀರಿ....

ಉಪಾಧ್ಯಕ್ಷರು: ಶೂನ್ಯವೇಳೆಯಲ್ಲಿ ಎಷ್ಟು ಹೇಳುತ್ತೀರಿ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: 50 ನೇ ಸ್ವಾತಂತ್ರ್ಯೋತ್ಸವ ಆಚರಣೆ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಹುಲ್ಲಿಗೂ ಗಾಂಧೀ ಟೋಪಿಗೂ ಸಂಬಂಧ ಇಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಭಾರತರಾಜ್ಯ ಎಂದರೆ ಗ್ರಾಮೀಣ ರಾಜ್ಯ ಭಾರತ ದೇಶ ಎಂದರೆ ಗ್ರಾಮೀಣ ದೇಶ ಎಂದು ಗಾಂಧಿಯವರು ಹೇಳಿದ್ದು. ಆದ್ದರಿಂದ ದಯವಿಟ್ಟು ಗಂಭೀರವಾಗಿ ಚಿಂತನೆ ಮಾಡಿ ಉತ್ತರ ಹೇಳಿ.

ಶ್ರೀ ರಮೇಶ್ ಜಿಗಜಿಣಗಿ (ಕಂದಾಯ ಮಂತ್ರಿಗಳು): ಉಪಾಧ್ಯಕ್ಷರೇ, ಮಾನ್ಯ ಪುಟ್ಟಣ್ಣಯ್ಯನವರು ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದವರು ತಪ್ಪಿಸಿಕೊಂಡುಹೋಗಬೇಕು ಎಂದು ಏನೂ ಇಲ್ಲ. ಉಪಾಧ್ಯಕ್ಷರೇ, ಅಲ್ಲಿ ಕಾನೂನುಗಳನ್ನು ಮಾಡಿದ್ದಾರೆ. ಯಾರೇ ಸರ್ಕಾರ ಮಾಡಿದರೂ ಕಾನೂನಿನ ಚೌಕಟ್ಟಿನಲ್ಲಿ ಸರ್ಕಾರ ನಡೆಸಬೇಕಾಗುತ್ತದೆ. ಈ ಕಾನೂನಿನಲ್ಲಿ ನ್ಯಾಚ್ಯುರಲ್ ಕೆಲಾಮಿಟಿ ಫಂಡ್ - ಸಿ.ಆರ್.ಎಫ್. ಫಂಡ್ ಇದೆಯಲ್ಲಾ, ಇದಕ್ಕೆ ಹೀಗೆ ಇರಬೇಕು, ಇಂತಹವರಿಗೆ

ಕೊಡಬೇಕು ಎಂದು ಹೇಳಿ ಕೇಂದ್ರಸರ್ಕಾರದವರು ಒಂದು ಗೈಡ್‌ಲೈನ್ಸ್ ಕೊಟ್ಟಿರುವುದರಿಂದ ಅದರ ಪ್ರಕಾರ ನಾವು ಡಿಸ್ಟ್ರಿಬ್ಯೂಟ್ ಮಾಡಿರುತ್ತೇವೆ. ಈಗ 18 ಸಾವಿರಕ್ಕಿಂತ ಮೇಲಿನ ಆದಾಯ ಇರತಕ್ಕದ್ದು ಇದ್ದರೆ ಅದು ದನ ಸಾಯಲಿ ಅಥವಾ ಅವನ ಹುಲ್ಲಿಗೆ ಮೆದೆ ಎಂದು ನಾವು ಹೇಳುತ್ತೇವೆ, ಅದಕ್ಕೆ ಬೆಂಕಿ ಬಿದ್ದರೆ ಕೂಡ ಅದಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಈ ಎನ್.ಸಿ.ಎಫ್.ನಲ್ಲಿ ಸಹಾಯ ಮಾಡುವುದು ಎಂದರೆ ಸಾಯುವ ಮನುಷ್ಯನಿಗೆ ನೀರು ಹಾಕಿದ ಹಾಗೆ ಅಷ್ಟೆ, ಸಂಪೂರ್ಣ ಬದುಕಿಸುವುದಕ್ಕೆ ಆಗುವುದಿಲ್ಲ. ಅತ್ಯಂತ ತೊಂದರೆ ಇರುವ ಸಮಾಜದ ಮನುಷ್ಯನಿಗೆ ಸ್ವಲ್ಪಮಟ್ಟಿಗೆ ಸಹಾಯವಾಗಲಿ ಎಂದು ಹೇಳಿ ಈ ಫಂಡ್‌ನಿಂದ ಸಹಾಯ ಮಾಡುತ್ತೇವೆ. ಇವತ್ತು ರಮೇಶ ಜಿಗಜಿಣಗಿ ಅಥವಾ ನಾಗೇಗೌಡರ ಆದಾಯ ಒಂದು ವರ್ಷಕ್ಕೆ ಎರಡು ಲಕ್ಷ ರೂಪಾಯಿ ಇದ್ದರೆ, ಅವರಿಗೆ ಐದುನೂರು ರೂಪಾಯಿ ಕೊಟ್ಟರೆ ಏನು ಪ್ರಯೋಜನ? ಅದಕ್ಕೆ ಅತ್ಯಂತ ಬಡವರಿಗೆ, ಸಣ್ಣ ರೈತರಿಗೆ ರಿಲೀಫ್ ಕೊಡುವುದು ಈಗಾಗಲೇ ನಾವು ಮಾಡುತ್ತಿದ್ದೇವೆ. ಇದನ್ನು ಜಾಸ್ತಿ ಮಾಡಬೇಕು ಎಂದು ಹೇಳಿ. ಈ ಸದನದಲ್ಲಿ ಬಹಳಷ್ಟು ಸಲ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ, ಇದರ ಬಗ್ಗೆ ನಾನು ಖಂಡಿತವಾಗಿಯೂ ಪುನಃ ಕೇಂದ್ರಸರ್ಕಾರಕ್ಕೆ ಬರೆಯುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಉಪಾಧ್ಯಕ್ಷರು: ಆಯಿತು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ರಾಜ್ಯಸರ್ಕಾರ ಏನಾದರೂ ಸಹಾಯ ಮಾಡಬೇಕು ಎನ್ನುವುದರ ಬಗ್ಗೆ ಒಂದೆರಡು ಮಾತು ಹೇಳಿಬಿಡಿ. ಇಲ್ಲದಿದ್ದರೆ ಒಂದು ಕೆಲಸ ಮಾಡಿ. ಫೈಯರ್ ಬ್ರಿಗೇಡ್‌ಗೆ ಆದೇಶ ಕೊಟ್ಟುಬಿಡಿ. ಸಣ್ಣಮನೆಗೆ ಬೆಂಕಿಬಿದ್ದರೆ ಹೋಗಿ, ದೊಡ್ಡ ಮನೆಗೆ ಬೆಂಕಿಬಿದ್ದರೆ ಹೋಗಬೇಡಿ ಎಂದು ಫೈರ್ ಬ್ರೀಗೇಡ್‌ನವರಿಗೆ ಹೇಳಿಬಿಡಿ. ತಾವು ರಾಜ್ಯಸರ್ಕಾರ ಏನಾದರೂ ಪರಿಶೀಲನೆ ಮಾಡಬೇಕು, ಸ್ವಾಮಿ. ಬಹಳ ಕಷ್ಟ ಇದೆ.

(ಉ) ಬಸ್‌ದರ ಏರಿಕೆಯಿಂದ ನಡೆದ ಸತ್ಯಾಗ್ರಹದಲ್ಲಿ ಭಾಗವಹಿಸಿದ ವ್ಯಕ್ತಿಗಳ ಮೇಲೆ ಹಾಕಿರತಕ್ಕ ಕೇಸ್‌ಗಳನ್ನು ಹಿಂದಕ್ಕೆ ಪಡೆಯುವುದು.

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ಮಾರ್ಚ್ ತಿಂಗಳಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್ಸು ದರವನ್ನು ಸರ್ಕಾರ ಒಮ್ಮಿಂದೊಮ್ಮೆಲೆ ಏರಿಸಿದ್ದರಿಂದ ರಾಜ್ಯದಲ್ಲಿ ವಿವಿಧ ಕಡೆ ಸಾಕಷ್ಟು ಸಂಘಸಂಸ್ಥೆಗಳು ಹಾಗೂ ರಾಜಕೀಯ ಪಕ್ಷಗಳು ಧರಣಿ ಸತ್ಯಾಗ್ರಹ ಹಾಗೂ ಬಸ್‌ಬಂದ್ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಾಕಿಕೊಳ್ಳಲಾಯಿತು. ಧರಣ, ಸತ್ಯಾಗ್ರಹ ಸಹಿತ ಯಶಸ್ವಿಯಾಗಿ ಅವರು ಮಾಡಿದ್ದರು. ಆದರೆ ಯಾವುದೇ ರೀತಿಯಿಂದ ದಾಂಧಲೆ ಮಾಡಿಲ್ಲ. ಎಲ್ಲೂ ಸಹ ಒಂದು ಘಟನೆ ಶಾಂತಿಯುತವಾಗಿ ಇದನ್ನು ಮಾಡಿದ್ದರಿಂದ ಆಗಲಿಲ್ಲ. ನಂತರದಲ್ಲಿ ಕೆಲವೊಂದು ಕಡೆ ಸತ್ಯಾಗ್ರಹ ಮಾಡಿದಂಥ ವ್ಯಕ್ತಿಗಳ ಮೇಲೆ ಪೊಲೀಸ್ ಕೇಸ್ ಮಾಡಿ ಆಮೇಲೆ ಕೋರ್ಟಿಗೆ